ಅವಳು. ಕೂಡಲೇ ಸಾವರಿಸಿಕೊಂಡು ಕೊಂಬೆ ಸರಿಯಾಗಿ ಹಿಡಿದುಕೊಂಡಳು.

ಅವಳೀಗ ನೆಲದ ಮೇಲೆ ಕುಳಿತುಕೊಂಡು ಮರದ ಬೊಡ್ಡೆಗೆ ತನ್ನ ಪಾದಗಳನ್ನು ಅದುಮಿದಳು. ಅವಳ ಕೈಗಳು ಉರಿಯುತ್ತಿದೆ. ಈ ಮರದ ಕೊಂಬೆಯ ಮೇಲೆ ತನ್ನ ದೇಹದ ಭಾರವನ್ನು ಬಿಡುತ್ತಾ ಬರುತ್ತಿದ್ದಾನೆ.

ಅಂಗೈನ ಚರ್ಮ ಕಿತ್ತು ಬರುತ್ತಿದೆ. ಉರಿ... ನೋವು...

ಅಬ್ಬ... ಸಹಿಸಲಾಗುತ್ತಿಲ್ಲ. ಹತ್ತು ನಿಮಿಷ ಕಳೆಯಿತು. ಪ್ರಯತ್ನ ಯಶಸ್ವಿಯಾಗಿತ್ತು. ಮದಂತನ ತಲೆ, ಮುಖ ಹೊರತುಪಡಿಸಿ ಉಳಿದ ಭಾಗವೆಲ್ಲಾ ಕೆಸರಿನಿಂದ ಆವರಿಸಿದೆ. ಅವಳು ಎರಡು ಕೈಗಳನ್ನು ಮುಖದ ಹತ್ತಿರ ಹಿಡಿದುಕೊಂಡು `ಉಫ್... ಉಫ್' ಎಂದು ಬಾಯಿಂದ ಗಾಳಿ ಊದುತ್ತಿದ್ದಾಳೆ. ಉರಿ, ಬೊಬ್ಬೆ ಹೊಡೆಯಬೇಕು ಎನಿಸುತ್ತಿದೆ. ಅವಳು ಸಹಿಸುತ್ತಿದ್ದಾಳೆ.

ಮದಂತ ಈಗ ಎದ್ದು ನೀರಿರುವ ಹೊಂಡದ ಕಡೆ ಬಂದ. ಅವಳು ಹಿಂಬಾಲಿಸಿದಳು. ಕೆಸರನ್ನು ತೊಳೆದುಕೊಂಡು ಚೆನ್ನಾಗಿ ಸ್ನಾನ ಮಾಡಿ ಪುನಃ ಕಾರಿನ ಹತ್ತಿರ ಬಂದ. ಅವಳು ಈಗ ಅವನಿಗೆ ಕಾರಿನಿಂದ ಟವಲನ್ನು ತೆಗೆದುಕೊಟ್ಟಳು. ಅವನು ಒರೆಸಿಕೊಂಡ ಕೂಡಲೇ ಫ್ಲಾಸ್ಕ್‌ನಿಂದ ಕಾಫಿ ಸುರಿದು ಕೊಟ್ಟಳು.

ಪರಿಮಳಯುಕ್ತವಾದ ಬಿಸಿ ಬಿಸಿ ಕಾಫಿ ಮದಂತನಿಗೆ ರಿಲೀಫ್ ನೀಡಿತು. ಮದಂತ ಅವಳ ಕಡೆ ನೋಡುತ್ತಾ ಎರಡು ಕೈಗನ್ನು ಜೋಡಿಸಿದ.

ಅವಳು ಕಿರುನಗೆ ಬೀರಿದಳು.

‘ನಿನ್ನ ಹೆಸರೇನಮ್ಮಾ?’

ಅವನನ್ನು ನೋಡುತ್ತಿದ್ದರೆ ಅವಳಲ್ಲಿ ಏನೋ ಒಂದು ರೀತಿಯ ಗೌರವ ಭಾವನೆ ಉಂಟಾಗುತ್ತಿದೆ.

‘ನನ್ನ ಹೆಸರು ಕಾವ್ಯ’

‘ನಿಮ್ಮ ತಂದೆತಾಯಿ...?’

‘ತಂದೆ ಮನೋಹರ... ತಾಯಿ ಅರುಂಧತಿ’

ಏನೋ ಪುಳಕ ಉಂಟಾಯಿತು. ಈ ಹೆಸರುಗಳನ್ನು ನಾನು ಎಲ್ಲಿಯೋ ಯಾವಾಗಲೋ ಕೇಳಿದ್ದೇನೆ.

‘ಅರುಂಧತಿ... ಮನೋಹರ!’ ಫ್ಲ್ಯಾಶ್ ಆಯಿತು. ಗುರು ಮಾಂತ್ರಿಕ ರುದ್ರನಾಗನ ತಂಗಿಯ ಹೆಸರು ಅರುಂಧತಿ. ಅವಳ ಗಂಡ ಮನೋಹರ.

ಅಯ್ಯೋ ಪೆದ್ದ... ಹೆಸರುಗಳು ಅದೇ ಆದ ಮಾತ್ರಕ್ಕೆ ವ್ಯಕ್ತಿಗಳು ಸಹ ಅವರೇ ಆಗಿರಬೇಕೆ. ಪೆದ್ದು ಪೆದ್ದಾಗಿ ಇವರ ಬಗ್ಗೆ ಕೇಳಬೇಡ ಎಂದಿತು ವಿವೇಕ.

‘ನಿಮ್ಮದು ಯಾವ ಊರು?’

ಕಾವ್ಯ ‘ನಮ್ಮ ತಂದೆತಾಯಿ ಇಂಡಿಯಾದವರು. ಆದರೆ ನಾನು ಹುಟ್ಟಿ, ಬೆಳೆದದ್ದು ಅಮೆರಿಕದಲ್ಲಿ. ನಾನು ಭಾರತಕ್ಕೆ ಬಂದು ಹತ್ತು ದಿನಗಳಾಯಿತು.’

ಹಾಗಾದರೆ ಇವರು ಅವರಲ್ಲ ಎಂದುಕೊಂಡ ಮದಂತ.

‘ನೀವು ಎಲ್ಲಿಗೆ ಹೋಗಬೇಕು?’

‘ಗೊತ್ತಿಲ್ಲ.’

ಕಾವ್ಯ ವಿಸ್ಮಯದಿಂದಲೇ ‘ಎಲ್ಲಿಗೆ ಹೋಗಬೇಕು ಅಂತ ಗೊತ್ತಿಲ್ಲದೆ ಪ್ರಯಾಣ ಮಾಡುತ್ತಿರುವವರು ನೀವೇ ಮೊದಲು ಅಂತ ಕಾಣುತ್ತೆ.’

ಮದಂತ ‘ನಿನ್ನಿಂದ ನನ್ನ ಪ್ರಾಣ ಉಳಿದಿದೆ. ನೀನು ಮಾಡಿರುವ ಉಪಕಾರ ಕಡಿಮೆಯೇನಲ್ಲ. ನಾನು ಯಾರ ಉಪಕಾರದ ಋಣವನ್ನು ಸಹ ಇಟ್ಟುಕೊಳ್ಳುವುದಿಲ್ಲ’

ಕಾವ್ಯ ನಗುತ್ತಾ ‘ಅಂದರೆ... ಅಂದರೆ ನೀವು ನನಗೆ ಉಪಕಾರ ಮಾಡುತ್ತೀರಾ?’

‘ಖಂಡಿತಾ ಮಾಡುತ್ತೇನೆ’

ಕಾವ್ಯ ತುಸು ಅಹಂಕಾರದಿಂದಲೇ ‘ಕೋಟ್ಯಾಧಿಪತಿ ನನ್ನ ತಂದೆಗೆ ಒಬ್ಬಳೇ ಮಗಳು ನಾನು. ನನ್ನಂಥ ಶ್ರೀಮಂತರ ಮನೆಯ ಹೆಣ್ಣಿಗೆ ನೀವು ಯಾವ ರೀತಿ ಸಹಾಯ ಮಾಡಲು ಸಾಧ್ಯ?’

ಮದಂತ ನಗುತ್ತಾ ‘ನಿನ್ನಂಥ ಶ್ರೀಮಂತ ಹೆಣ್ಣಿನಿಂದ ನನ್ನ ಪ್ರಾಣ ಉಳಿಯುತ್ತದೆ ಅಂತ ನಾನು ಅಂದುಕೊಂಡಿರಲಿಲ್ಲ. ಅದೇ ರೀತಿ ಮುಂದೆ ಯಾವಾಗಲಾದರೂ ನನ್ನ ಸಹಾಯ ಬೇಕಾಗಬಹುದು’.

ಕಾವ್ಯ ನಗುತ್ತಲೇ ‘ಅಂಥ ಪ್ರಸಂಗ ಬರುವುದಿಲ್ಲ. ಈಗ ನೀವು ನನ್ನ ಜೊತೆ ನಗರಕ್ಕೆ ಬರುವುದಾದರೆ ಕರೆದುಕೊಂಡು ಹೋಗುತ್ತೇನೆ’.

ಮದಂತ ‘ನಗರಕ್ಕೆ ನೀನು ಕರೆದುಕೊಂಡು ಹೋಗುತ್ತೀಯ. ಅಲ್ಲಿಂದ ಮುಂದೆ...’

‘ನಿಮಗೆ ಬಂಧುಗಳು... ಸ್ನೇಹಿತರು...’

‘ಯಾರೂ ಸಹ ಇಲ್ಲ.’

‘ಇಷ್ಟು ದಿವಸ ಎಲ್ಲಿದ್ರಿ?’

‘ಸೋಲಿಗಪುರದಲ್ಲಿ.’

ಸೋಲಿಗಪುರ ಎಂಬ ಹೆಸರನ್ನು ಕೇಳಿದ ಕೂಡಲೇ ಅವಳು ವಿಸ್ಮಯದಿಂದ ‘ನಿಮಗೆ ಮಾಂತ್ರಿಕ ರುದ್ರನಾಗ ಗೊತ್ತೆ?’ ಬೆಚ್ಚಿಬಿದ್ದ ಮದಂತ. ಅವಳ ಮುಖವನ್ನೇ ನೋಡುತ್ತಾ ‘ರುದ್ರನಾಗ ನಿನಗೆ ಹೇಗೆ ಪರಿಚಯ?’

ಕಾವ್ಯ ‘ನಾನು ಕೇಳಿದ್ದಕ್ಕೆ ಉತ್ತರಿಸಿ.’

ಮದಂತ ‘ರುದ್ರನಾಗ ನನಗೆ ಇಪ್ಪತ್ತು ವರ್ಷಗಳ ಪರಿಚಯ. ನಾನು ಅವರ ಮನೆಯಲ್ಲೇ ಇದ್ದೆ’.

ಸಂತೋಷ, ಆಶ್ಚರ್ಯದಿಂದ ‘ಅಂದರೆ ನಿಮಗೆ ರುದ್ರನಾಗ ಅವರ ಬಗ್ಗೆ ಗೊತ್ತಿದೆ ಅನ್ನಿ’.

ಮದಂತ ರುದ್ರನಾಗನಂಥ ವ್ಯಕ್ತಿಯ ಬಗ್ಗೆ ಇಷ್ಟು ಆಸಕ್ತಿಯಿಂದ ವಿಚಾರಿಸುತ್ತಿರಬೇಕಾದರೆ...

ಅವಳು ಕೂಡಲೇ ‘ಅವರು ನನ್ನ ತಾಯಿಯ ಅಣ್ಣ. ಸೋದರಮಾವ.’

ಮದಂತನಿಗೆ ಇದೊಂದು ರೀತಿಯ ಶಾಕ್! ಅವನು ಸಾವರಿಸಿಕೊಂಡು ‘ನಿನ್ನ ತಂದೆತಾಯಿ ಎಲ್ಲಿದ್ದಾರೆ?’

‘ಬೆಂಗಳೂರಿನಲ್ಲಿ’

‘ನಾನವರನ್ನು ನೋಡಬೇಕು.’

‘ನನ್ನ ತಾಯಿ ಪರಿಚಯ ಇರುವುದೆ?’

ಮದಂತ ತಲೆಯಾಡಿಸಿದ.

‘ನಿಮ್ಮ ಹೆಸರೇನು?’

‘ಮದಂತ ಅಂತ’.

ಕಾವ್ಯ ನಗುತ್ತಾ ‘ವಿಚಿತ್ರ ಹೆಸರು. ನೀವು ನನ್ನ ಮಾವನ ಹತ್ತಿರ ಏನು ಮಾಡಿಕೊಂಡಿದ್ರಿ?’

‘ಮಾಂತ್ರಿಕ ವೃತ್ತಿ...’

‘ಅಂದರೆ ಮಾಟ... ಮಂತ್ರ..’

ಮದಂತ ತಲೆಯಾಡಿಸಿದ..

ಕಾವ್ಯ ಕುತೂಹಲ, ಆತುರದಿಂದ ‘ನನ್ನ ಸೋದರಮಾವ ಒಬ್ಬ ದೊಡ್ಡ ಮಾಂತ್ರಿಕ ಅಂತ ನನ್ನ ತಾಯಿ ಆಗಾಗ ಹೇಳುತ್ತಿದ್ದರು. ತಿಳಿಯದೆ ಕೇಳುತ್ತಿದ್ದೇನೆ. ಈ ಮಾಟಮಂತ್ರ ಎಲ್ಲಾ ನಿಜವೆ? ಸ್ಮಶಾನದಲ್ಲಿ ಕುಳಿತು ಮಾಟ ಮಾಡಿದರೆ ವ್ಯಕ್ತಿ ಸಾಯುತ್ತಾನೆಯೆ?’

‘ಖಂಡಿತ ಸಾಯುತ್ತಾನೆ’

‘ಆದರೆ ಹೇಗೆ... ಹೇಗೆ...?’

ಮದಂತ ‘ಹೇಗೆ ಅಂತ ಬಾಯಲ್ಲಿ ಉತ್ತರಿಸಿ ಅದನ್ನು ನಿರೂಪಿಸುವುದು ಕಷ್ಟ. ಸಮಯ ಬಂದಾಗ ಅದು ನಿನ್ನ ಅನುಭವಕ್ಕೆ ಬರುವಂತೆ ಮಾಡುತ್ತೇನೆ. ನಿನ್ನ ತಾಯಿಯನ್ನು ನೋಡಬೇಕು ನಾನು...’

ಅವಳು ಸಂತೋಷ, ಉತ್ಸಾಹದಿಂದ ‘ಬನ್ನಿ... ಕರೆದುಕೊಂಡು ಹೋಗುತ್ತೇನೆ.’

ಕಾರು ಹೊರಟಿತು. ಯಾವುದರಿಂದ ದೂರ ಇರಬೇಕು ಅಂದುಕೊಂಡಿದ್ದನೋ... ಏನನ್ನು ಮಾಡಬಾರದು ಎಂದುಕೊಂಡಿದ್ದನೋ ಈಗ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಬೇಕಿತ್ತು. ಮದಂತ ಈಗ ಹೊಸ ಬಂಧನಕ್ಕೆ ಸಿಕ್ಕಿಕೊಂಡಿದ್ದ.

* * *

ಅದು ಒಂಟಿ ಮನೆ. ಸುತ್ತಲೂ ತಂತಿಬೇಲಿಯನ್ನು ನಿರ್ಮಿಸಲಾಗಿತ್ತು. ಅದು ನಾಡಹೆಂಚಿನ ಮನೆ.

ಮುಂಭಾಗದ ಜಗುಲಿಯ ಮೇಲೆ ಕುಳಿತುಕೊಂಡು ತಲೆಯ ಬುರುಡೆಗಳು ಮತ್ತು ಕಾಲಿನ ಮೂಳೆಗಳನ್ನು ಒರೆಸುತ್ತಿದ್ದಾನೆ ಮುದುಕ. ತಲೆಯ ಕೂದಲು ಪೂರ್ತಿಯಾಗಿ ಬೆಳ್ಳಗಾಗಿದೆ. ಪೊದೆಯಂತೆ ಗಡ್ಡ ಬೆಳೆದಿದೆ. ತುಸು ಸ್ಥೂಲ ದೇಹ. ಹೆಜ್ಜೆಗಳ ಶಬ್ದ ಕೇಳಿ ಹಿಂತಿರುಗಿದ ರುದ್ರನಾಗ. ಅಲ್ಲಿ ವ್ಯಕ್ತಿಯೊಬ್ಬ ನಿಂತಿದ್ದ. ಅವನನ್ನು ಕೂಡಲೇ ಗುರುತಿಸಲಾಗಲಿಲ್ಲ. ಹತ್ತಿರಬಂದು ನೋಡಿದ ಕೂಡಲೇ ಅವನ ಬಾಯಿಂದ ಉದ್ಗಾರ ಬಂದಿತು.

‘ಹಾಂ... ನೀನಾ...!?

ಸೋಲಿಗಪುರದ ಒಂಟಿಮನೆ!

ಮುಂಭಾಗದ ಜಗುಲಿಯ ಮೇಲೆ ಅವರಿಬ್ಬರು ಎದುರು ಬದುರಾಗಿ ನಿಂತುಕೊಂಡಿದ್ದಾರೆ.

ವೃದ್ಧ ಮಾಂತ್ರಿಕ ರುದ್ರನಾಗ!

ಅವನ ಪರಮಶತ್ರು ಮನೋಹರ! ರುದ್ರನಾಗ ಕೋಪ, ಆವೇಶದಿಂದ ಬುಸುಗುಡುತ್ತಿದ್ದಾನೆ. ತನ್ನ ಶತ್ರು ತನ್ನ ಎದುರು ಈ ರೀತಿ ನಿಲ್ಲುತ್ತಾನೆ ಎಂದು ಅಂದುಕೊಂಡಿರಲಿಲ್ಲ. ಮನೋಹರ ಭಯಗೊಂಡ. ತಾನು ಇಲ್ಲಿಗೆ ಬರಬಾರದಾಗಿತ್ತು ಎಂದು ಈಗ ಅನಿಸಿದೆ ಅವನಿಗೆ. ತನ್ನ ಹೆಂಡತಿಮಕ್ಕಳ ಸಾವಿಗೆ ಕಾರಣನಾಗಿರುವ ವ್ಯಕ್ತಿ ಇಪ್ಪತ್ತು ವರ್ಷಗಳ ನಂತರ ಬಂದಿದ್ದಾನೆ.

ಮನೋಹರ ಬಂದಿದ್ದು ತನ್ನ ತಪ್ಪಿಗೆ ಕ್ಷಮೆ ಕೇಳಲು. ಆದರೆ ಈ ಮುದುಕನ ಕೋಪ, ಆವೇಶ ನೋಡುತ್ತಿದ್ದಂತೆ ಭಯವಾಗುತ್ತಿದೆ.

ಮನೋಹರ ಏನನ್ನೋ ಹೇಳಲು ಪ್ರಯತ್ನಿಸಿದ. ಆದರೆ ರುದ್ರನಾಗ ತನ್ನ ಮುಖ ತಿರುಗಿಸಿಕೊಂಡು ‘ಸಾವನ್ನು ಬಯಸಿ ಬಂದಿರುವ ನಿನಗೆ ಸ್ವಾಗತ’ ಎಂದ. (ಸಶೇಷ)